## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ

## ಆಳಂದ

ಸಿ.ಸಿ, ನಂಬರ 355/2015 ಸಿ.ಡಬ್ಲೂ.7 ಪಿ.ಡಬ್ಲೂ.6

| | |
|---|---|
| ಹೆಸರು | ಸಂತೋಷ |
| ತಂದೆ/ಗಂಡ | ಶಂಕರ |
| ವಯಸ್ಸು | 41 ವರ್ಷ |
| ಉದ್ಯೋಗ | ಪಿ.ಐ ಲೋಕಾಯುಕ್ತ ಬಿದರ |
| ವಾಸಸ್ಥಳ | ಬಿದರ |

ದಿನಾಂಕ 12-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಫೆಬ್ರವರಿ 2014 ರಿಂದ ಜೂಲೈ 2016 ರವರೆಗೆ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21-02-2015 ಮ.1.00 ಗಂಟೆಗೆ ಚಾಸ-1 ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆಯ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ಹಾ ಸಂಖ್ಯೆ 21/2015 ಅಂತಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡು ದಿಃ 22-02-2015 ರಂದು ಚಾಸಾ 2 ಮತ್ತು 3 ರವರ ಸಮಕ್ಷಮ ಗುನ್ನ ಸ್ಥಳದ ಪಂಚನಾಮೆಯನ್ನು ಬೆ.11.00 ರಿಂದ 12.00 ಗಂಟೆಯವರೆಗೆ ಜರುಗಿಸಿ ಸ್ಥಳದಿಂದ ಒಂಸಂತೋಷದು ಬಡಿಗೆಯನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಅದೇ ಚಾಸಾ 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 28-03-2015 ರಂದು ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಹಾಜರಾದ ಮೇರೆಗೆ ಸೂಕ್ತ ಜಾಮೀನನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 29-03-2015 ರಂದು ಚಾಸಾ 1 ರವರ ಗಾಯಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ.3 ರಲ್ಲಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3(ಬಿ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ.1 ರಲ್ಲಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1(ಬಿ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ.2 ರಲ್ಲಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2(ಬಿ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಮು.ಮಾ.1 ರ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು

ಮು.ಮಾ. 1(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ **ಶ್ರೀ. ಬಿ ಎ ಡಿ** ವಕೀಲರಿಂದ:</u>

ನಿಪಿ-6 ದೂರನ್ನು ನಾನು ನನ್ನ ಕೈ ಬರಹದಲ್ಲಿ ಬರೆದುಕೊಂಡಿರುವುದಿಲ್ಲ. ಸದರಿ ನಿಪಿ-6 ದೂರನ್ನು ನಮ್ಮ ಠಾಣಾ ಬರಹಗಾರರಾದ ಸತೀಶ್ ಅವರು ನನ್ನ ಸಮಕ್ಷಮ ಬರೆದಿರುತ್ತಾರೆ. ನಿಪಿ-6ರಲ್ಲಿ ಅವರ ಹೆಸರು ಮತ್ತು ಸಹಿ ಇಲ್ಲ ಎಂದರೆ ಸರಿ. ಚಾಸ-1ರವರ ಜೊತೆ ದೂರು ಸಲ್ಲಿಸುವಾಗ ಯಾರು ಬಂದಿದ್ದರು ಎಂದು ನನಗೆ ನೆನಪಿಲ್ಲ. ನಿಪಿ-6ರಲ್ಲಿ ಇರುವ ಮಾಹಿತಿಯನ್ನು ಚಾಸ-1ರವರಿಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1ನ್ನು ನಾನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸ-2 ಮತ್ತು 3ರವರ ಸಹಿಯನ್ನು ನಾನು ನಿಪಿ-1ರಲ್ಲಿ ಇರುವ ಮಾಹಿತಿಯನ್ನು ತಿಳಿಸದೇ ಠಾಣೆಯಲ್ಲಿ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ-1ನ್ನು ಘಟನಾ ಸ್ಥಳದಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸ-4 ಮತ್ತು 5 ರವರ ಹೇಳಿಕೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಚಾಸ-1ರವರ ಮಧ್ಯೆ ಸಿವಿಲ್ ವಾಜ್ಯ ಇದ್ದ ಬಗ್ಗೆ ನನಗೆ ಮಾಹಿತಿ ಇತ್ತು. ಸಾಕ್ಷಿಯು ಮುಂದುವರೆದು ದಾರಿಯ ಸಂಬಂದವಾಗಿ ಜಗಳ ಇತ್ತು ಎಂದು ನುಡಿಯುತ್ತಾರೆ. ಸಿವಿಲ್ ವಾಜ್ಯದ ಬಗ್ಗೆ ನಾನು ತನಿಖೆ ಮಾಡಿಲ್ಲ ಎಂದರೆ ಸಾಕ್ಷಿಯು ಸದರಿ ಪ್ರಕರಣದ ಬಗ್ಗೆ ಮಾತ್ರ ತನಿಖೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತನಿಖಾ ಕಾಲದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಕಂಡುಬಂದರು ಸಹಿತ ನಾನು ತಪ್ಪು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ